ರಾಜ್ಯದಲ್ಲಿ ಎಣ್ಣೆಕಾಳುಗಳ ಉತ್ಪಾದನೆ.

454 (2300)ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಕಳೆದ 3 ವರ್ಷಗಳಲ್ಲಿ ಎಣ್ಣೆ ಕಾಳುಗಳು ಮತ್ತು ಬೇಳೆಕಾಳುಗಳು ಬೆಳೆದ ಪ್ರದೇಶ ಮತ್ತು ಉತ್ಪನ್ನ (ವರ್ಷಾವಾರು ವಿವರ ಒದಗಿಸುವುದು);

ಆ) ಉತ್ಪಾದನಾ ಮಟ್ಟವನ್ನು ಹೆಚ್ಚಿಸಲು ಅಳವಡಿಸಿಕೊಂಡ ತಂತ್ರಗಳು;

ಇ) ಕಳೆದ ಮೂರು ವರ್ಷಗಳಲ್ಲಿ ಕೀಟನಾಶಕಗಳು ಮತ್ತು ರಸಾಯನಿಕ ಗೊಬ್ಬರಗಳ ಬಳಕೆ (ವರ್ಷವಾರು ವಿವರ ನೀಡುವುದು);

ಈ) 1992-93ನೇ ಸಾಲಿಗೆ ರಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅವಶ್ಯ ಎಷ್ಟಿದೆ ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)-

ಅ) ವರ್ಷಾವಾರು ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ

	ಎಣ್ಣೆಕಾಳುಗಳು		ಬೇಳೆಕಾಳುಗಳು	
	ಪ್ರದೇಶ ಲಕ್ಷ ಹೆಕ್ಟೇರು ಗಳಲ್ಲಿ	ಉತ್ಪನ್ನ ಲಕ್ಷ ಟನ್ನು ಗಳಲ್ಲಿ	ಪ್ರದೇಶ ಲಕ್ಷ ಹೆಕ್ಟರು ಗಳಲ್ಲಿ	ಉತ್ಪನ್ನ ಲಕ್ಷ ಟನ್ನು ಗಳಲ್ಲಿ
88-89	23.05	13.70	16.26	4.62
89-90	22.65	13.86	16.47	5.46
90-91	25.88	13.96	16.57	6.35

ಆ) ಈ ಕೆಳಕಂಡ ತಂತ್ರಗಳನ್ನು ಎಣ್ಣೆಕಾಳುಗಳ ಮತ್ತು ಬೇಳೆಕಾಳುಗಳ ಉತ್ಪಾದನಾ ಮಟ್ಟವನ್ನು ಹೆಚ್ಚಸಲು ಅಳವಡಿಸಿಕೊಳ್ಳಲಾಗಿದೆ :

1. ಪ್ರಮಾಣಿತ ಬೀಜಗಳ ಮತ್ತು ಅಧಿಕ ಇಳುವರಿ ತಳಿಗಳನ್ನು ಉಪಯೋಗಿಸುವುದನ್ನು ಹೆಚ್ಚಿಸುವುದರ ಜೊತೆಗೆ ಸಕಾಲದಲ್ಲಿ ರಸಾಯನಿಕ ಗೊಬ್ಬರ ,ಸಸ್ಯ ಸಂರಕ್ಷಣಾ ರಸಾಯನಿಕಗಳು ಮತ್ತು ಕೃಷಿ ಸಾಲದಂತಹ ಪರಿಕರಗಳನ್ನು ಒದಗಿಸುವುದು.
2. ಬೇಸಿಗೆ ಕಾಲದಲ್ಲಿ ಕೆರೆ, ಬಾವಿಗಳು ಮತ್ತು ಅಚ್ಚುಕಟ್ಟು ಪ್ರದೇಶಗಳು ವ್ಯವಸಾಯಕ್ಕೊಳಪಟ್ಟ ಪ್ರದೇಶವನ್ನು ವಿಸ್ತರಿಸುವುದು.
3. ಏಕದಳ ಧಾನ್ಯಗಳು ಮತ್ತು ತೃಣ ಧಾನ್ಯಗಳ ಪ್ರದೇಶವನ್ನು ಎಣ್ಣೆಕಾಳುಗಳಿಗಾಗಿ ಮತ್ತು ಬೇಳೆಕಾಳುಗಳಿಗಾಗಿ ಪರಿವರ್ತಿಸುವುದು.
4. ಕರಾವಳಿ ಜಿಲ್ಲೆಗಳಲ್ಲಿ ಭತ್ತದ ಪರ್ಯಾಯವಾಗಿ ಶೇಂಗಾ ಮತ್ತು ಬೇಳೆಕಾಳುಗಳನ್ನು ಬೆಳೆಯುವುದು.
5. ಶೇಂಗಾ ಮತ್ತು ಬೇಳೆಕಾಳುಗಳಿಗೆ ರೈಜೊಬಿಯಂ ಕಲ್ಚರ್ ಅನ್ನು ಉಪಯೋಗಿಸುವುದು ಮತ್ತು ಶೇಂಗಾ ಬೆಳೆಗೆ ಜಿಪ್ಸಂ ಹಾಕುವುದು.
6. ಶಿಫಾರಸ್ಸಿನ ಪ್ರಕಾರ ರಾಸಾಯನಿಕ ಗೊಬ್ಬರವನ್ನು ,ಲಘು ಪೋಷಕಾಂಶಗಳನ್ನು

ಹಾಕುವುದು.

7. ಅಗತ್ಯತೆ ಆಧಾರಿತ ಸಸ್ಯ ಸಂರಕ್ಷಣಾ ಕ್ರಮಗಳು.

ಇ) ಲಗತ್ತಿಸಿದೆ.

ಈ) ರಾಸಾಯನಿಕ ಗೊಬ್ಬರಗಳು - 9.72 ಲಕ್ಷ ಟನ್ನುಗಳು.

ಕೀಟನಾಶಕಗಳು - 4200ಮೆ. ಟನ್ನುಗಳು (ತಾಂತ್ರಿಕ ಮಟ್ಟ)

ಹೈದ್ರಾಬಾದ್ ಕರ್ನಾಟಕ ಜಿಲ್ಲೆಯಲ್ಲಿರುವ ಪಶು ವೈದ್ಯ ಕೇಂದ್ರಗಳ ಸಂಖ್ಯೆ

457 (2292) ಶ್ರೀ ಬಾಬುರಾವ್ ಚವಾಣ್ (ಶಹಾಬಾದ್)

ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿರುವ ಪಶುವೈದ್ಯ ದವಾಖಾನೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಆ) ಈ ಭಾಗಕ್ಕೆ ಹೆಚ್ಚಿಗೆ ದವಾಖಾನೆ ತೆರೆಯಲಾಗುವುದೇ;

ಇ) ಹಾಗಿದ್ದಲ್ಲಿ ಈ ಹಿಂದುಳಿದ ಭಾಗವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಹೆಚ್ಚಿಗೆ ದವಾಖಾನೆ ತೆರೆಯಲು ಸರ್ಕಾರದ ವತಿಯಿಂದ ಕೈಗೊಂಡ ಯೋಜನೆಗಳೇನು?

ಶ್ರೀ ಬಸವರಾಜ್ ಪಾಟೀಲ್
(ಪಶುಸಂಗೋಪನಾ ರಾಜ್ಯ ಸಚಿವರು):-

ಅ) 319 ತಾಲ್ಲೂಕುವಾರು ವಿವರ ಲಗತ್ತಿಸಿದೆ).

ಆ) ಹೌದು.

ಇ) ಇಲಾಖೆಯ ಎಲ್ಲಾ ಯೋಜನೆಗಳನ್ನು ಸಮಾನವಾಗಿ ಹೈದ್ರಾಬಾದ್ ಕರ್ನಾಟಕ ಸೇರಿದಂತೆ ರಾಜ್ಯದಲ್ಲಿ ಕಾರ್ಯಗತ ಮಾಡಲಾಗುತ್ತಿದೆ.

ಈ) ಹಂತ ಹಂತವಾಗಿ ತೆರೆಯಲಾಗುವುದು.